<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1058** |
| **ಸದಸ್ಯರ ಹೆಸರು** | : | **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ**<br>**[ವಿಧಾನ ಸಭೆಯಿಂದ ಚುನಾಯಿತರಾದವರು]** |
| **ಉತ್ತರಿಸುವ ದಿನಾಂಕ** | : | **18.12.2024** |
| **ಉತ್ತರಿಸುವ ಸಚಿವರು** | : | **ಕಂದಾಯ ಸಚಿವರು** |

| | ಪ್ರಶ್ನೆ | ಉತ್ತರ |
|---|---|---|
| (ಅ) | ಕರಾವಳಿ ಭಾಗದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮೂಲಗೇಣಿ ಒಕ್ಕಲುಗಳಿಗೆ ಮಾಲೀಕತ್ವ ನೀಡುವ ಕಾರ್ಯ ಸಂಪೂರ್ಣವಾಗಿ ಜಾರಿಯಾಗಿ ಮೂಲಗೇಣಿ ಒಕ್ಕಲುಗಳಿಗೆ ನ್ಯಾಯ ಒದಗಿಸಲಾಗಿದೆಯೇ; | ಕೃಷಿಯೇತರ ಭೂಮಿಗಳು, ಮುಖ್ಯವಾಗಿ ಮನೆ ನಿವೇಶನಗಳ ಸಂಬಂಧದಲ್ಲಿ ಮೂಲಗೇಣಿ ಗುತ್ತಿಗೆಗಳ ಕೆಲವು ಬಗೆಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಚಾಲ್ತಿಯಲ್ಲಿವೆ. ಅನೇಕ ಕಾರಣಗಳಿಂದ ಮೂಲಗೇಣಿದಾರರು ಅಥವಾ ಒಳಮೂಲಗೇಣಿದಾರರು ಆ ಹಿಡುವಳಿ ಸ್ವತ್ತನ್ನು ಪೂರ್ಣವಾಗಿ ಅನುಭವಿಸಲು ಸಾಧ್ಯವಾಗಿರಲಿಲ್ಲ. ಆದುದರಿಂದ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರದಾನ ಮಾಡಲು **ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರದಾನ ಮಾಡುವ ಅಧಿನಿಯಮ, 2011** ಅನ್ನು ದಿನಾಂಕ: 25.07.2012 ರಂದು ಸರ್ಕಾರವು ರಾಜ್ಯಪತ್ರದಲ್ಲಿ ಪ್ರಕಟಿಸಿತ್ತು. ಈ ಅಧಿನಿಯಮದ ಉಪಬಂಧಗಳು ದಿನಾಂಕ: 20.12.2012 ರಿಂದ ಜಾರಿಗೆ ಬಂದಿರುತ್ತವೆ.<br><br>ಮೇಲ್ಕಂಡ ಅಧಿನಿಯಮ ಜಾರಿಗೆ ಬಂದ ನಂತರ, ಅದನ್ನು ಜಾರಿಗೊಳಿಸಲು ನಿಯಮಗಳನ್ನು ಸಹ ರಚಿಸಲು ಸರ್ಕಾರ ತಯಾರು ಮಾಡಿಕೊಂಡಿತ್ತು. ಈ ಹಂತದಲ್ಲಿ ಮೂಲಗೇಣಿದಾರರ ಸಂಘ ಮತ್ತು ಮೂಲಿದಾರರ ಸಂಘಗಳು ಸದರಿ ಮಾಲೀಕತ್ವ ಪ್ರದಾನ ಮಾಡುವ ಅಧಿನಿಯಮಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಅನೇಕ ಮನವಿಗಳನ್ನು ಸಲ್ಲಿಸಿದ್ದರು. ಸರ್ಕಾರದ ಹಂತದಲ್ಲಿ ಈ ಬಗ್ಗೆ ಪರಿಶೀಲಿಸಿ, ಸದರಿ ಕಾಯ್ದೆಯನ್ನು ಅನುಷ್ಠಾನಗೊಳಿಸಲು ದಿನಾಂಕ: 07.11.2016 ರಂದು **ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರದಾನ ಮಾಡುವ ನಿಯಮಗಳು, 2016** ಅನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಿರುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಮತ್ತು ಉಡುಪಿ ರವರಿಗೆ ಸೂಚನೆಗಳನ್ನು ಸಹ ನೀಡಿ ಸದರಿ ನಿಯಮಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಬೇಕೆಂದು ತಿಳಿಸಲಾಗಿತ್ತು. |
| (ಆ) | ಮೂಲಗೇಣಿ ಒಕ್ಕಲುಗಳಿಗೆ ಮಾಲೀಕತ್ವ ನೀಡುವ ವಿಚಾರದಲ್ಲಿ ಇದುವರೆಗೆ ಕಂದಾಯ ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು; | |
| (ಇ) | ಯಾವ ಕಾಲಮಿತಿಯೊಳಗೆ ಮೂಲಗೇಣಿ ಒಕ್ಕಲುಗಳಿಗೆ ಜಮೀನಿನ ಪೂರ್ಣ ಮಾಲೀಕತ್ವ ನೀಡಿ ಆ ಮೂಲಕ ಹಲವಾರು ದಶಕಗಳಿಂದ ತ್ರಿಶಂಕು ಸ್ಥಿತಿಯಲ್ಲಿ ಬದುಕುತ್ತಿರುವ ಮೂಲಗೇಣಿದಾರರಿಗೆ ನ್ಯಾಯ ಒದಗಿಸಲಾಗುವುದೇ? | |

| | | |
|---|---|---|
| | | ಈ ಹಂತದಲ್ಲಿ ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ: 11158-66/2013 ಮತ್ತು 62434/2016 ದಾಖಲಾಗಿತ್ತು. ಸದರಿ ಪ್ರಕರಣವು ದಿನಾಂಕ: 22.05.2023 ರಲ್ಲಿ ಇತ್ಯರ್ಥವಾಗಿರುತ್ತದೆ. ಆದರೆ ಸದರಿ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ W.A.No.726/2023 ದಾಖಲಾಗಿರುತ್ತದೆ. ಪ್ರಸ್ತುತ ಪ್ರಕರಣ ವಿಚಾರಣಾ ಹಂತದಲ್ಲಿರುತ್ತದೆ. |

**ಸಂಖ್ಯೆ: ಆರ್‌ಡಿ 24 ಎಲ್‌ಆರ್‌ಎಸ್ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು